# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : **696** |
| ಸದಸ್ಯರ ಹೆಸರು | ಶ್ರೀ ಕೆ ಹರೀಶ್ ಕುಮಾರ್<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | **21.02.2024** |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ಭೂ ಸುಧಾರಣಾ ಕಾನೂನು 1961ರ ತಿದ್ದುಪಡಿ ಕಾಯ್ದೆ 1974/75 ರಂತೆ ಉಳುವವನೇ ಭೂಮಿಯ ಒಡೆಯ ಕಾಯ್ದೆ ಇರುವುದು ನಿಜವೇ; | ಕರ್ನಾಟಕ ಭೂ ಸುಧಾರಣಾ ಕಾಯ್ದೆ, 1961ರ ಕಲಂ 45ರಡಿ ನಮೂನೆ-7ರಲ್ಲಿ ಗೇಣಿದಾರನೆಂದು ಅರ್ಜಿಗಳನ್ನು ಸಲ್ಲಿಸಲು ದಿನಾಂಕ:01.03.1974 ರಿಂದ 30.06.1979 ರವರೆಗೆ ಅವಕಾಶ ಕಲ್ಪಿಸಲಾಗಿತ್ತು.<br><br>ಕರ್ನಾಟಕ ಭೂ ಸುಧಾರಣಾ ಕಾಯ್ದೆ, 1961ರ ಕಲಂ 77-ಎ ರಡಿ ನಮೂನೆ-7ಎ ರಲ್ಲಿ ಗೇಣಿದಾರನೆಂದು ಅರ್ಜಿಗಳನ್ನು ಸಲ್ಲಿಸಲು ದಿನಾಂಕ: 01.11.1998 ರಿಂದ ಒಂದು ವರ್ಷದವರೆಗೆ ಅವಕಾಶ ಕಲ್ಪಿಸಲಾಗಿತ್ತು.<br><br>ಆದರೆ ಪ್ರಸ್ತುತ ನಮೂನೆ-7 ಹಾಗೂ ನಮೂನೆ-7ಎ ಅರ್ಜಿಗಳನ್ನು ಸಲ್ಲಿಸಲು ಅವಕಾಶವಿರುವುದಿಲ್ಲ. |
| ಆ) | ಸರ್ಕಾರಿ ಸೇವೆಯಲ್ಲಿದ್ದು, ಪಿತ್ರಾರ್ಜಿತ ಕೃಷಿ ಭೂಮಿ ಹೊಂದಲು ಅವಕಾಶವಿರುವುದು ನಿಜವೆ; ಇದ್ದಲ್ಲಿ, ನೌಕರರು ಸದರಿ ಕಾಯ್ದೆಯ ಅನುಕೂಲ ಪಡೆದು ತನ್ನ ಪತ್ನಿಯ ಹೆಸರಿನಲ್ಲಿ ನಮೂನೆ-7 ರಡಿ ಮೂರನೇ ವ್ಯಕ್ತಿಗೆ ಸೇರಿದ ಕೃಷಿ ಭೂಮಿಗೆ ಕೃಷಿ ಹಿಡುವಳಿ ಗೇಣಿದಾರನೆಂದು ಅರ್ಜಿ ಸಲ್ಲಿಸಲು ಸದರಿ ಕಾನೂನಿನಲ್ಲಿ ಅವಕಾಶವಿದೆಯೇ? (ವಿವರಿಸುವುದು) | ಕರ್ನಾಟಕ ಭೂ ಸುಧಾರಣೆ ಕಾಯ್ದೆ, 1961ರ ಕಲಂ 79ಎ ಹಾಗೂ 79ಬಿ ಗಳನ್ನು ತೆಗೆದಿರುವುದರಿಂದ ಕೃಷಿ ಭೂಮಿಯನ್ನು ಹೊಂದಲು ಅವಕಾಶ ಕಲ್ಪಿಸಲಾಗಿದೆ.<br><br>ಮುಂದುವರೆದು, ಕರ್ನಾಟಕ ಭೂ ಸುಧಾರಣಾ ಕಾಯ್ದೆ, 1961ರ ಕಲಂ 45ರಡಿ ನಮೂನೆ-7 ಅನ್ನು ಸಲ್ಲಿಸಲು ಕರ್ನಾಟಕ ಭೂ ಸುಧಾರಣಾ ಕಾಯ್ದೆ, 1961ರ ಕಲಂ 45(2)ರ ಉಪ ಪ್ರಕರಣ (1)ರಲ್ಲಿ ಈ ಕೆಳಕಂಡ ಮಾನದಂಡಗಳನ್ನು ನಿಗಧಿಪಡಿಸಲಾಗಿದೆ.<br><br>(2) ಉಪ ಪ್ರಕರಣ (1)ರಲ್ಲಿ ಉಲ್ಲೇಖಿಸಿರುವ ಗೇಣಿದಾರನು ಅಥವಾ ಇತರ ವ್ಯಕ್ತಿಯು,-<br><br>(i) ಭೂಮಿಯನ್ನು ಭಾಗಶಃ ಒಡೆಯನಾಗಿ ಮತ್ತು ಭಾಗಶಃ ಗೇಣಿದಾರನಾಗಿ ಧಾರಣ ಮಾಡಿದ್ದು, ಅವನು ಒಡೆಯನಾಗಿ ಧಾರಣ ಮಾಡಿರುವ ಭೂಮಿಯ ವಿಸ್ತೀರ್ಣವು ಗರಿಷ್ಠ ಮಿತಿ ವಿಸ್ತೀರ್ಣಕ್ಕೆ ಸಮನಾಗಿದ್ದರೆ ಅಥವಾ ಮೀರಿದ್ದರೆ, ನಿಹಿತವಾಗುವ ದಿನಾಂಕಕ್ಕೆ ಮೊದಲು, ಗೇಣಿದಾರನಾಗಿ ಅವನು ಧಾರಣ ಮಾಡಿದ್ದ ಭೂಮಿಯ ಅಧಿಭೋಗದಾರನಾಗಿ ನೋಂದಾಯಿತನಾಗಲು ಅವನು ಹಕ್ಕುಳ್ಳವನಾಗಿರತಕ್ಕದ್ದಲ್ಲ; |

| | | |
|---|---|---|
| | | (ii) ಒಡೆಯನಾಗಿ ಯಾವುದೇ ಭೂಮಿಯನ್ನು ಧಾರಣ ಮಾಡಿರದಿದ್ದರೆ ಮತ್ತು ಸ್ವತಃ ಸಾಗುವಳಿ ಮಾಡದಿದ್ದರೆ, ಆದರೆ ಗರಿಷ್ಠ ಮಿತಿ ವಿಸ್ತೀರ್ಣವನ್ನು ಮೀರಿದ ಭೂಮಿಯನ್ನು ಗೇಣಿದಾರನಾಗಿ ಅವನು ಧಾರಣ ಮಾಡಿದ್ದು, ಅದನ್ನು ಸ್ವತಃ ಸಾಗುವಳಿ ಮಾಡುತ್ತಿದ್ದರೆ ಗರಿಷ್ಠ ಮಿತಿ ವಿಸ್ತೀರ್ಣದಷ್ಟರ ಮಟ್ಟಿಗೆ ಅಧಿಭೋಗದಾರನಾಗಿ ನೋಂದಾಯಿತನಾಗಲು ಅವನು ಹಕ್ಕುಳ್ಳವನಾಗಿರತಕ್ಕದ್ದು.<br><br>(iii) ಗರಿಷ್ಠ ಮಿತಿ ವಿಸ್ತೀರ್ಣಕ್ಕಿಂತ ಕಡಿಮೆ ವಿಸ್ತೀರ್ಣದ ಯಾವುದೇ ಭೂಮಿಯನ್ನು ಒಡೆಯನಾಗಿ ಧಾರಣ ಮಾಡಿದ್ದರೆ ಮತ್ತು ಸ್ವತಃ ಸಾಗುವಳಿ ಮಾಡುತ್ತಿದ್ದರೆ, ಅವನ ಹಿಡುವಳಿಯನ್ನು ಗರಿಷ್ಠ ಮಿತಿ ವಿಸ್ತೀರ್ಣಕ್ಕೆ ಸಮನಾಗಿಸಲು ಸಾಕಾಗುವಷ್ಟು ವಿಸ್ತೀರ್ಣದ ಭೂಮಿಯ ಮಟ್ಟಿಗೆ ಅಧಿಭೋಗದಾರನೆಂದು ನೋಂದಾಯಿತನಾಗಲುಅವನು ಹಕ್ಕುಳ್ಳವನಾಗಿರತಕ್ಕದ್ದು.<br><br>ಈ ಮೇಲ್ಕಂಡ ಮಾನದಂಡಗಳನ್ವಯ ಅರ್ಹತೆ ಇದ್ದಲ್ಲಿ ನಮೂನೆ-7ರಡಿ ಅರ್ಜಿ ಸಲ್ಲಿಸಲು ಅವಕಾಶವಿತ್ತು. |

**ಸಂಖ್ಯೆ: ಕಂಇ 5 ಎಲ್‌ಆರ್‌ಎಸ್ 2024 (ಇ)**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು